# ಹುತಾತ್ಮರ ದಿನಾಚರಣೆ

## 30-01-2023







ರಾಷ್ಟ್ರದ ಐಕ್ಯತೆಯನ್ನು ಉತ್ತೇಜಿಸುವುದು ನಮ್ಮ ಆದರ್ಶವಾಗಿರಬೇಕು

–ಡಾ.ಎಸ್.ಮರೀಗೌಡ

ದಿನಾಂಕ:೩೦.೦೧.೨೦೨೩ರಂದು ವಿದ್ಯಾವರ್ಧಕ ಪ್ರಥಮ ದರ್ಜೆ ಕಲೇಜಿನ ಆವರಣದಲ್ಲಿ ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹುತಾತ್ಮರಾದವರ ಜ್ಞಾಪಕಾರ್ಥವಾಗಿ ಹುತಾತ್ಮರ ದಿನಾಚರಣೆಯನ್ನು ಆಚರಿಸಲಾಯಿತು. ಕಾಲೇಜಿನ ಪ್ರಾಂಶುಪಾಲರಾದ ಡಾ.ಎಸ್.ಮರೀಗೌಡ ಅವರು ರಾಷ್ಟ್ರಪಿತ ಮಹಾತ್ಮಗಾಂದಿಯವರ ಭಾವಚಿತ್ರಕ್ಕೆ ಪುಷ್ಪಾರ್ಚನೆಯನ್ನು ಮಾಡಿದರು. ನಂತರ ಎಲ್ಲರಿಗೂ "ಸರ್ವಧರ್ಮ ಸಂರಕ್ಷಣಾ ಪ್ರತಿಜ್ಞೆ"ಯನ್ನು ಬೋಧಿಸಿದರು. ಮುಂದುವರೆದು ವಿದ್ಯಾರ್ಥಿಗಳಿಗೆ ನಾವು ಸ್ವಾತಂತ್ರ್ಯ ಪಡೆಯುವಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಪಾತ್ರವನ್ನು ತ್ಯಾಗ, ಬಲಿದಾನಗಳನ್ನು ತಿಳಿಸಿಕೊಟ್ಟರು. ಸ್ವಾತಂತ್ರ್ಯವನ್ನು ಉಳಿಸುವುದು, ಸಂರಕ್ಷಿಸುವುದು ಮತ್ತು ರಾಷ್ಟ್ರದ ಐಕ್ಯತೆಯನ್ನು ಉತ್ತೇಜಿಸುವುದು ನಮ್ಮ ಗುರಿ ಮತ್ತು ಆದರ್ಶಗಳಾಗಿರಬೇಕೆಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ರಾಷ್ಟ್ರೀಯ ಸ್ವಯಂ ಸೇವಕ ಘಟಕದ ಸಂಯೋಜಕರಾದ ಡಾ.ಧನಂಜಯ ಪಾಲಹಳ್ಳಿಯವರು, ಅಧ್ಯಾಪಕ ಸಲಹೆಗಾರರಾದ ಪ್ರೊ.ಸತೀಶ್.ಟಿ ಅವರು ಹಾಗೂ ಅಧ್ಯಾಪಕ ವೃಂದದವರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿ ಬೆಳಿಗ್ಗೆ ೧೧.೦೦ ರಿಂದ ೧೧.೦೨ರವರೆಗೆ ಮೌನಾಚರಣೆಯನ್ನು ಆಚರಿಸಿದ ನಂತರ ಪ್ರತಿಜ್ಞಾ ವಿಧಿಯನ್ನು ಸ್ವೀಕರಿಸಿದರು.








NATIONAL SERVICE SCHEME




PARKING













